# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಎಂವೈಎಸ್/1350/2021
ಮಂಡನಾಧಿಕಾರಿಗಳ ಶಾಖೆ, ಎಆರ್ಇ-18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 06/12/2021

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ಹೆಚ್.ಎಸ್. ಮಲ್ಲೇಶಯ್ಯ ತಂದೆ ಲೇಟ್ ಸಣ್ಣಪ್ಪಗೌಡ, ಪ್ರಥಮ ದರ್ಜೆ ಸಹಾಯಕ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ವಿಶೇಷ ಭೂ ಸ್ವಾಧೀನಾಧಿಕಾರಿ ಕಛೇರಿ, ಮೈಸೂರು, ಹಾಲಿ ಕರ್ತವ್ಯ: ಪ್ರ.ದ.ಸ., ತಾಲ್ಲೂಕು ಕಛೇರಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

*****

1. ಮೈಸೂರು ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ಹೆಚ್.ಎಸ್. ಮಲ್ಲೇಶಯ್ಯ ತಂದೆ ಲೇಟ್ ಸಣ್ಣಪ್ಪಗೌಡ, ಪ್ರಥಮ ದರ್ಜೆ ಸಹಾಯಕ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ವಿಶೇಷ ಭೂ ಸ್ವಾಧೀನಾಧಿಕಾರಿ ಕಛೇರಿ, ಮೈಸೂರು, ಹಾಲಿ ಕರ್ತವ್ಯ: ಪ್ರ.ದ.ಸ., ತಾಲ್ಲೂಕು ಕಛೇರಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ಶ್ರೀ ನಾಗೇಶ ತಂದೆ ದೊಡ್ಡ ಬೋಳೇಗೌಡ, ನಂ. 375, ಹೊಸಬೀದಿ, ಹಿನಕಲ್, ಮೈಸೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸವನ್ನು

ಮಾಡಿಕೊಡಲು ಲಂಚದ ಹಣ ಕೇಳಿ ಪಡೆದುಕೊಂಡು ದುರ್ನಡತೆ ತೋರಿಸಿರುತ್ತಾರೆ ಎಂದು ಸಲ್ಲಿಸಿದ ವರದಿಯ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಳ್ಳಲಾಗಿದೆ.

2. <u>ದೂರಿನ ಸಂಕ್ಷಿಪ್ತ ಸಾರಾಂಶ</u>:– ಮೈಸೂರಿನ ಹಿನಕಲ್‌ನಲ್ಲಿ ದೂರುದಾರರ ತಾತ ಶ್ರೀ ಹೆಚ್. ಕೆ. ರಾಮಯ್ಯರವರ ಹೆಸರಿನಲ್ಲಿ ಸರ್ವೆ ನಂ. 10/1ಎ ರಲ್ಲಿ 1 ಎಕರೆ 24 ಗುಂಟೆ, ಸರ್ವೆ ನಂ. 10/1ಬಿ ರಲ್ಲಿ 26 ಗುಂಟೆ ಜಮೀನುಗಳು ಇರುತ್ತವೆ. ಸದರಿ ಜಮೀನು ಮೈಸೂರು ಮುಡಾದವರ ಸ್ವಾಧೀನದಲ್ಲಿರುವುದಾಗಿ ಪಹಣಿ ಪತ್ರಿಕೆಯಲ್ಲಿ ತೋರಿಸುತ್ತಿದ್ದುದ್ದರಿಂದ, ದಿನಾಂಕ 26/05/2017 ರಂದು ದೂರುದಾರರು ಮುಡಾಕ್ಕೆ ಹೋಗಿ ಸಂಬಂಧಪಟ್ಟ ಕೇಸ್‌ವರ್ಕರ್‌ರವರಾದ ಶ್ರೀ ಹೆಚ್.ಎಸ್. ಮಲ್ಲೇಶಯ್ಯ ತಂದೆ ಲೇಟ್ ಸಣ್ಣಪ್ಪಗೌಡ, ಪ್ರಥಮ ದರ್ಜೆ ಸಹಾಯಕ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ವಿಶೇಷ ಭೂ ಸ್ವಾಧೀನಾಧಿಕಾರಿ ಕಛೇರಿ, ಮೈಸೂರು, ಹಾಲಿ ಕರ್ತವ್ಯ: ಪ್ರ.ದ.ಸ., ತಾಲ್ಲೂಕು ಕಛೇರಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಉಲ್ಲೇಖಿಸಲಾಗುವುದು) ರವರನ್ನು ಭೇಟಿ ಮಾಡಿ ಜಮೀನಿನ ಬಗ್ಗೆ ಮಾಹಿತಿ ನೀಡುವಂತೆ ಕೋರಿದಾಗ ದೂರುದಾರರಿಗೆ ಆರ್.ಟಿ.ಐ.ನಲ್ಲಿ ಅರ್ಜಿ ಸಲ್ಲಿಸುವಂತೆ ತಿಳಿಸಿರುತ್ತಾರೆ. ಅದರಂತೆ ಅವರು ಅದೇ ದಿನ ದಿ: 26/05/2017 ರಂದು ಆರ್.ಟಿ.ಐ. ರಡಿಯಲ್ಲಿ ಅರ್ಜಿ ಸಲ್ಲಿಸಿ ಎದುರುದಾರರನ್ನು ದಿನಾಂಕ 01/06/2017ರಂದು ಸಂಜೆ ಸುಮಾರು 5-45 ಘಂಟೆ ಸಮಯದಲ್ಲಿ ದೂರುದಾರರು ತಮ್ಮ ಬಾವನವರಾದ ಶ್ರೀ ಮಹೇಶ ಕೆ.ಪಿ.ರವರ ಮೊಬೈಲ್‌ನಿಂದ ಎದುರುದಾರರಿಗೆ ಕರೆ ಮಾಡಿದಾಗ ಅರ್ಜಿಯ ಮಾಹಿತಿ ನೀಡಲು ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆ. ಈ ಹಿಂದೆಯೂ ದೂರುದಾರರು 5-6 ಸಾವಿರ ರೂಪಾಯಿ ಲಂಚದ ಹಣವನ್ನು ನೀಡಿರುವುದಾಗಿ ಎದುರುದಾರರಿಗೆ ತಿಳಿಸಿದರೂ ಸಹ ಮತ್ತೆ ಲಂಚದ ಹಣ ನೀಡುವಂತೆ ಒತ್ತಾಯಿಸಿರುತ್ತಾರೆ.

ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ದೂರುದಾರರು ತಮ್ಮ ಬಾವನವರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದಿನಾಂಕ 05/06/2017 ರಂದು ಮತ್ತೆ ಎದುರುದಾರರು ಮುಡಾ ಕಛೇರಿಯಲ್ಲಿ ಭೇಟಿಯಾಗಿ ತಮ್ಮ ಅರ್ಜಿಯ ಬಗ್ಗೆ ವಿಚಾರಿಸಿದಾಗ ಎದುರುದಾರರು ದೂರುದಾರರಿಗೆ ರೂ. 5,000/– ಲಂಚ ನೀಡುವಂತೆ ಒತ್ತಾಯಿಸಿರುತ್ತಾರೆ.

3. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 06/06/2017 ರಂದು ಮಧ್ಯಾಹ್ನ 3–00 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಮೈಸೂರು ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದ್ದನ್ನು ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 07/2017 ಪಿ.ಸಿ. ಕಾಯಿದೆ ಕಲಂ 7, 13(1) (ಡಿ) ಸಹವಾಚಕ ಕಲಂ 13 (2) ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

4. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಎನ್‌ಟ್ರಸ್ಟ್‌ಮೆಂಟ್ ಪಂಚನಾಮೆ ಕಾಲಕ್ಕೆ ಮೊಬೈಲ್‌ನಿಂದ ರೆಕಾರ್ಡ್ ಮಾಡಿಕೊಂಡಿರುವುದನ್ನು ಹಾಜರುಪಡಿಸುವಂತೆ ಸೂಚಿಸಿದಾಗ ದೂರುದಾರರು ತಮ್ಮ ಬಾವನವರಾದ ಮಹೇಶರವರ ಮೊಬೈಲ್ ಮೂಲಕ ಎದುರುದಾರರೊಂದಿಗೆ ನಡೆಸಿದ ಸಂಭಾಷಣೆಯನ್ನು ಮೊಬೈಲ್‌ನ ಮೆಮೋರಿ ಚಿಪ್‌ಗೆ ವರ್ಗಾವಣೆ ಮಾಡಿಕೊಂಡಿರುವುದಾಗಿ ತಿಳಿಸಿ ಮೆಮೊರಿ ಚಿಪ್‌ನ್ನು ಹಾಜರುಪಡಿಸಿದಾಗ ತನಿಖಾಧಿಕಾರಿಯು ಸದರಿ ಮೆಮೋರಿ ಚಿಪ್‌ನ್ನು 'ಕಾರ್ಡ್‌ರೀಡರ್' ಮೂಲಕ ತಮ್ಮ ಲ್ಯಾಪ್ ಟಾಪ್‌ನಲ್ಲಿ ಹಾಕಿ ಪರಿಶೀಲಿಸಿ ಅದನ್ನು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ಒಂದು ಡಿಜಿಟಲ್ ವಾಯ್ಸ್ ರೆಕಾರ್ಡರನ್ನು ನೀಡಿ ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಿ ಎದುರುದಾರರನ್ನು ಭೇಟಿ ಮಾಡುವ ಸಮಯದಲ್ಲಿ ವಾಯ್ಸ್ ರೆಕಾರ್ಡರನ್ನು ಆನ್ ಮಾಡಿಕೊಂಡು ಎದುರುದಾರರು ಮತ್ತು

ದೂರುದಾರರ ನಡುವೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳುವಂತೆ ತಿಳಿಸಿರುತ್ತಾರೆ.

5. ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು, ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಎರಡು ವಾಹನಗಳಲ್ಲಿ ಹೊರಟು ದೂರುದಾರರಿಗೆ ಎದುರುದಾರರು ಬರಲು ತಿಳಿಸಿದ ಸ್ಥಳವಾದ ಮೈಸೂರು ನಗರದ ಝಾನ್ಸಿ ಲಕ್ಷ್ಮೀಬಾಯಿ ರಸ್ತೆಯಲ್ಲಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಟ್ಟಡದ ಬಲಭಾಗದ ರಸ್ತೆಯ ಬಳಿ ವಾಹನಗಳನ್ನು ನಿಲ್ಲಿಸಿ ತನಿಖಾಧಿಕಾರಿಗಳು, ದೂರುದಾರರು ಮತ್ತು ನೆರಳು ಸಾಕ್ಷಿಯಾದ ಶ್ರೀ ಲೋಕೇಶ ಹೆಚ್. ಜೆ. ರವರಿಗೆ ಈ ಹಿಂದೆ ಕೊಟ್ಟ ಸೂಚನೆಗಳನ್ನು ಮತ್ತೊಮ್ಮೆ ಮನವರಿಕೆ ಮಾಡಿಕೊಟ್ಟು ಕಳುಹಿಸಿರುತ್ತಾರೆ. ಆ ಪ್ರಕಾರ ದೂರುದಾರರು ಮತ್ತು ನೆರಳು ಸಾಕ್ಷಿದಾರರು ಕೂಡಿಕೊಂಡು ಭೂ ಸ್ವಾಧೀನ ಶಾಖೆಗೆ ಹೋಗಿ ಎದುರುದಾರರನ್ನು ದೂರುದಾರರು ಭೇಟಿ ಮಾಡಿ ಮಾಹಿತಿ ಹಕ್ಕು ಅಧಿನಿಯಮದಡಿ ಸಲ್ಲಿಸಿದ್ದ ಮಾಹಿತಿಯನ್ನು ನೀಡುವಂತೆ ಕೇಳಿದಾಗ ಎದುರುದಾರರು ದೂರುದಾರರಿಗೆ ಒಂದು ಪತ್ರವನ್ನು ತೋರಿಸಿ ಮಾಹಿತಿಯು ರೆಡಿ ಇದೆ, "ನಾನು ತಿಳಿಸಿದ ಹಣವನ್ನು ಕೊಡು" ಎಂದು ಅವರಿಗೆ ಕೇಳಿರುತ್ತಾರೆ. ಆಗ ದೂರುದಾರರು ಎದುರುದಾರರ ಕಂಪಾರ್ಟ್‌ಮೆಂಟಿನ ಹಿಂಭಾಗ ಹೋಗಿ ಜೇಬಿನಿಂದ ಫಿನಾಪ್ತಲಿನ್ ಪೌಡರ್ ಲೇಪಿತ 5,000/- ರೂ. ಲಂಚದ ಹಣವನ್ನು ಎದುರುದಾರರಿಗೆ ನೀಡಿದಾಗ ಹಣವನ್ನು ಪಡೆದು ಶರ್ಟಿನ ಎಡಜೇಬಿನಲ್ಲಿ ಇಟ್ಟುಕೊಂಡು ದೂರುದಾರರಿಗೆ ಒಂದು ಪತ್ರವನ್ನು ನೀಡಿ ಇದೇ ಕೇಳಿರುವ ಮಾಹಿತಿ ಎಂದು ಹೇಳಿರುತ್ತಾರೆ. ನಂತರ ದೂರುದಾರರು ಕಛೇರಿಯಿಂದ ಹೊರಗಡೆ ಬಂದು ಎನ್‌ಟ್ರಸ್ಟ್‌ಮೆಂಟ್ ಮಹಜರ್ ಕಾಲಕ್ಕೆ ನೀಡಿದ ಸೂಚನೆಯಂತೆ ತಮ್ಮ ತಲೆಯನ್ನು ಸವರಿಕೊಳ್ಳುವ ಮೂಲಕ ನಿಗಧಿತ ಸೂಚನೆಯನ್ನು ನೀಡಿರುತ್ತಾರೆ. ಆಗ ತನಿಖಾಧಿಕಾರಿಯವರು ಅಲ್ಲಿಗೆ ಬಂದು ತಮ್ಮ ಸಿಬ್ಬಂದಿಯವರಿಗೆ ಎದುರುದಾರರ ಬಲಗೈ ಮತ್ತು ಎಡಗೈಯನ್ನು

ಹಿಡಿದುಕೊಳ್ಳುವಂತೆ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ತಮ್ಮ ಗುರುತಿನ ಚೀಟಿಯನ್ನು ತೋರಿಸಿ ಬಂದ ಉದ್ದೇಶವನ್ನು ತಿಳಿಸಿ ತಮ್ಮ ಪರಿಚಯ ಮಾಡಿಕೊಟ್ಟಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆದಾಗ ಬಣ್ಣರಹಿತವಾದ ದ್ರಾವಣವು ತೆಳು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಅದೇ ರೀತಿ ಎಡಗೈ ಬೆರಳುಗಳನ್ನು ಮತ್ತೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ಅದ್ದಿಸಿ ತೊಳೆದಾಗ ದ್ರಾವಣವು ತೆಳು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣ ಎಲ್ಲಿ ಎಂದು ಕೇಳಿದಾಗ ತಮ್ಮ ಶರ್ಟಿನ ಎಡಭಾಗದ ಜೇಬಿನಿಂದ ಲಂಚದ ಹಣದ ನೋಟುಗಳನ್ನು ಹಾಜರುಪಡಿಸಿದಾಗ ಸದರಿ ನೋಟಿನ ವಿವರದ ಹಾಳೆಯೊಂದಿಗೆ ಪರಿಶೀಲಿಸುವಂತೆ ತನಿಖಾಧಿಕಾರಿಗಳು ಪಂಚ ಸಾಕ್ಷಿ 1 ರವರಿಗೆ ಸೂಚಿಸಿದಾಗ ಅವರು ತಮ್ಮ ಬಳಿ ಇದ್ದ ನೋಟಿನ ವಿವರದ ಹಾಳೆಯೊಂದಿಗೆ ಪರಿಶೀಲಿಸಿ ನೋಡಿದಾಗ ನೋಟುಗಳು ತಾಳೆಯಾಗುತ್ತವೆ ಎಂದು ತಿಳಿಸಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಪಡೆದು ಶರ್ಟಿನ ಎಡಬದಿಯ ಜೇಬಿನಲ್ಲಿ ಇರಿಸಿದ್ದ ಶರ್ಟನ್ನು ತೆಗೆಯಿಸಿ ಸದರಿ ಶರ್ಟಿನ ಎಡಬದಿಯ ಜೇಬನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿದಾಗ ದ್ರಾವಣವು ಕಡು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಪಂಚರ ಸಮಕ್ಷಮ ಸದರಿ ಲಂಚದ ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಂದ ಡಿಜಿಟಲ್ ವಾಯ್ಸ್ ರೆಕಾರ್ಡರನ್ನು ಕೇಳಿ ಪಡೆದುಕೊಂಡು ಅದನ್ನು ಲ್ಯಾಪ್‌ಟಾಪ್‌ಗೆ ಹಾಕಿ ಒಂದು ಸಿ.ಡಿ.ಯನ್ನು ಮಾಡಿಕೊಂಡಿರುತ್ತಾರೆ ಮತ್ತು ಎನ್‌ಟ್ರಸ್ಟ್‌ಮೆಂಟ್ ಮಹಜರ್ ಕಾಲದಲ್ಲಿ ದೂರುದಾರರಿಂದ ಪಡೆದ ಮೆಮೊರಿ ಚಿಪ್‌ನ್ನು ಪಂಚರಿಗೆ ಕೇಳಿಸಿ ಸದರಿ ಸಂಭಾಷಣೆಯನ್ನು ಲ್ಯಾಪ್‌ಟಾಪ್ ಮೂಲಕ

ಎರಡು ಸಿ.ಡಿ.ಗೆ ಕಾಪಿ ಮಾಡಿಕೊಂಡು ಅವುಗಳನ್ನು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಲಿಖಿತ ಸ್ವರಕ್ಷಣಾ ಹೇಳಿಕೆಯನ್ನು ಬರೆದುಕೊಡುವಂತೆ ತಿಳಿಸಿದಾಗ ಎದುರುದಾರರು ತಮ್ಮ ಸ್ವರಕ್ಷಣಾ ಹೇಳಿಕೆಯನ್ನು ಬರೆದುಕೊಟ್ಟಿದ್ದು ಅದರಲ್ಲಿ "ಶ್ರೀ ನಾಗೇಶರವರು ಮಾಹಿತಿ ಹಕ್ಕು ಕಾಯಿದೆಯಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಹಿನಕಲ್ ಗ್ರಾಮದ ಸರ್ವೆ ನಂ. 10/1ಎ, 10/1ಬಿ ರ ಜಮೀನು ಮಾಹಿತಿಯನ್ನು ಕೋರಿರುತ್ತಾರೆ, ದಿ: 06/06/2017 ರಂದು ಸಂಜೆ ಮಾಹಿತಿಯನ್ನು ನೀಡಿದ್ದು, ಈತನಿಂದ ಯಾವುದೇ ಹಣ ಕೇಳದಿದ್ದರೂ ಸಹ ನನ್ನ ಹಿಂಬದಿಯಿಂದ ಬಂದು ಶರ್ಟ್ ಜೇಬಿಗೆ ಹಣವನ್ನು ತುರುಕಿದಾಗ ನಾನು ಆ ಹಣವನ್ನು ಜೇಬಿನಿಂದ ಕೆಳಗೆ ಬಿಸಾಡಿದ್ದು ಆ ಸಮಯಕ್ಕೆ ಸರಿಯಾಗಿ ಎ ಸಿ ಬಿ ಪೊಲೀಸರು ಟ್ರಾಪ್ ಮಾಡಿದ್ದು, ಯಾವುದೇ ಹಣವನ್ನು ನಾನು ಕೇಳದಿದ್ದರೂ ಸಹ ಉದ್ದೇಶಪೂರ್ವಕವಾಗಿ ನನಗೆ ತೊಂದರೆ ಕೊಡುವ ಉದ್ದೇಶದಿಂದ ಈ ರೀತಿ ಮಾಡಿರುತ್ತಾರೆ. ಇದರಲ್ಲಿ ನನ್ನ ತಪ್ಪೇನು ಇರುವುದಿಲ್ಲ" ಎಂದು ಬರೆದುಕೊಟ್ಟ ವರದಿಯ ಬಗ್ಗೆ ನೆರಳು ಸಾಕ್ಷಿದಾರರಿಗೆ ಕೇಳಿದಾಗ ಅವರು ಎದುರುದಾರರು ದೂರುದಾರರ ಕೆಲಸವನ್ನು ಮಾಡಿಕೊಡಲು ಲಂಚದ ಹಣವನ್ನು ತೆಗೆದುಕೊಂಡಿದ್ದು ವರದಿಯಲ್ಲಿ ಲಂಚದ ಹಣವನ್ನು ಪಡೆದುಕೊಂಡಿರುವ ವಿಚಾರವನ್ನು ಮರೆ ಮಾಚಿಸಿರುತ್ತಾರೆ ಎಂದು ನುಡಿದಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಎದುರುದಾರರು ಬರೆದುಕೊಟ್ಟ ವರದಿಯ ಬಗ್ಗೆ ಕೇಳಿದಾಗ "ಅವರು ನನ್ನ ಕೆಲಸವನ್ನು ಮಾಡಿಕೊಡಲು ಲಂಚದ ಹಣವನ್ನು ತೆಗೆದುಕೊಂಡಿದ್ದು ವರದಿಯಲ್ಲಿ ಲಂಚದ ಹಣವನ್ನು ಪಡೆದುಕೊಂಡಿರುವ ವಿಚಾರವನ್ನು ಮರೆ ಮಾಚಿಸಿರುತ್ತಾರೆ" ಎಂಬುದಾಗಿ ನುಡಿದಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ಸದರಿ ದ್ರಾವಣ ಹಾಗೂ ಶರ್ಟನ್ನು ಮುಂದಿನ ಕ್ರಮಕ್ಕಾಗಿ ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ.

6. ಎದುರುದಾರರಿಗೆ ದಿನಾಂಕ 04/08/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಸಿ ಕೇಳಲಾಗಿತ್ತು.

7. ಎದುರುದಾರರು ತಮ್ಮ ಸಮಜಾಯಿಸಿಯನ್ನು ದಿನಾಂಕ 15/09/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಸಿಯನ್ನು ಪರಿಶೀಲಿಸಲಾಗಿ ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಸಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

8. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ದೂರುದಾರರು ತಮ್ಮ ತಾತ ಶ್ರೀ ಹೆಚ್. ಕೆ. ರಾಮಯ್ಯರವರ ಹೆಸರಿನಲ್ಲಿದ್ದ ಸರ್ವೆ ನಂ. 10/1ಎ ಮತ್ತು 10/1ಬಿ ರಲ್ಲಿನ ಜಮೀನು ಮೈಸೂರು ಮುಡಾದ ಸ್ವಾಧೀನದಲ್ಲಿರುವುದಾಗಿ ಆರ್. ಟಿ. ಸಿ. ಯಲ್ಲಿ ನಮೂದು ಬರುತ್ತಿದ್ದು, ಇದರ ಬಗ್ಗೆ ಮಾಹಿತಿ ನೀಡಲು ಕೋರಿ ಮಾಹಿತಿ ಹಕ್ಕು ಕಾಯಿದೆಯಡಿಯಲ್ಲಿ ಅರ್ಜಿ ಸಲ್ಲಿಸಿದಾಗ, ಸಾರ್ವಜನಿಕ ಮಾಹಿತಿ ಹಕ್ಕು ಅಧಿಕಾರಿಗಳು ಮತ್ತು ಪ್ರಭಾರ ವ್ಯವಸ್ಥಾಪಕರು ಆದ ಎದುರುದಾರರು ದೂರುದಾರರಿಗೆ 5,000/- ರೂ. ಲಂಚದ ಹಣಕ್ಕೆ ಒತ್ತಾಯಿಸಿ ದಿ: 06/06/2017 ರಂದು ದೂರುದಾರರಿಂದ ರೂ. 5,000/- ಲಂಚದ ಹಣವನ್ನು ಕೇಳಿ ಪಡೆದುಕೊಂಡಿದ್ದು, ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ದೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i)

ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

9. ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ಹೆಚ್.ಎಸ್. ಮಲ್ಲೇಶಯ್ಯ ತಂದೆ ಲೇಟ್ ಸಣ್ಣಪ್ಪಗೌಡ, ಪ್ರಥಮ ದರ್ಜೆ ಸಹಾಯಕ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ವಿಶೇಷ ಭೂ ಸ್ವಾಧೀನಾಧಿಕಾರಿ ಕಛೇರಿ, ಮೈಸೂರು, ಹಾಲಿ ಕರ್ತವ್ಯ: ಪ್ರ.ದ.ಸ., ತಾಲ್ಲೂಕು ಕಛೇರಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಈ ವರದಿ ತಲುಪಿದ ದಿನಾಂಕದಿಂದ <u>ಮೂರು ತಿಂಗಳೊಳಗಾಗಿ</u> ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

7/12/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.